ಕವನ ಚಿತ್ರಪಟ

# ಕಾಗೆ ಮತ್ತು ನಾಯಿ


ಲೇಖಕರು: ಟಿ.ಎಸ್. ನಾಗರಾಜ ಶೆಟ್ಟಿ

ಆಕರ: ಸಮಗ್ರ ಮಕ್ಕಳ ಕವಿತೆಗಳು

ಮೊ: ೯೪೪೮೭೯೫೩೭



ಪ್ರಕಾಶನ: ನಿರ್ಮಲ ಪ್ರಕಾಶನ, ತಿಪಟೂರು



ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ




ನವೆಂಬರ್ – ಡಿಸೆಂಬರ್ ೨೦೨೪–೨೫


ಆರಂಭ ಯೋಜನೆ

Arambha 2024-25 Project
is Supported by Many
Individual Donors

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ

**Dhwani Educational Resource Centre**



ಊಟದೆಲೆಯನೊಂದ ಕಂಡು
ನೋಟ ಅಲ್ಲೆ ಸಿಕ್ಕಿಕೊಂಡು
ಕೂಗಿ ಕೂಗಿ ಕರೆಯಿತಾಗ
ಕಾಗೆ ತನ್ನ ಬಳಗವ



ಕ್ಷಣವು ಕಳೆಯುವಷ್ಟರಲ್ಲಿ
ಎಣಿಸಲಾಗದಷ್ಟು ಕಾಗೆ
ಅಬ್ಬ! ಹಾರಿ ಬಂದು ಸೇರಿ
ಹಬ್ಬವೆಂದು ಕುಣಿದವು




ಮುಗುಳಿನಂಥ ಅಗುಳು ಎಲ್ಲ
ರಗಳೆ ಇರದೆ ತಿನ್ನುತಿರಲು
ಬೊಗಳುತ್ತಿದ್ದ ಎರಡು ನಾಯಿ
ವಿಗಡತನದಿ* ಬಂದವು

* ವಿಗಡತನದಿ – ಸಾಹಸದಿಂದ, ಧೈರ್ಯದಿಂದ, ಶೌರ್ಯದಿಂದ, ಕೆಚ್ಚಿನಿಂದ, ಶೂರತನದಿಂದ, ಪರಾಕ್ರಮದಿಂದ



ಆಗ ಎಲ್ಲ ಕಾಗೆ ಹೆದರಿ
ಬೇಗ ತಮ್ಮ ಬಾಲ ಮುದುರಿ
ಹಿಂದೆ ಹಿಂದೆ ಸರಿಯುತಿರಲು
ಮುಂದೆ ನಾಯಿ ನುಗ್ಗಲು


ಒಂದು ನಾಯಿ 'ಗುರ್' ಎನಲು
ಕಂದು ನಾಯಿ 'ಗುರ್' ಎನಲು
ಬೊಗಳಿ ಬೊಗಳಿ ಎರಡು ನಾಯಿ
ಜಗಳವಾಡುತಿದ್ದವು.



ತಿನುವೆ ನಾನೆ ಅನ್ನ ಮೊದಲು
ಎನುವ ಹುರುಡು* ಹೂಡಿ ಅವು
ಹಿಂದೆ ಮುಂದೆ ಎಲೆಯನೆಳೆದು
ಚಿಂದಿ ಚಿಂದಿ ಹರಿದವು !

* ಹುರುಡು – ಸ್ಪರ್ಧೆ, ಪೈಪೋಟಿ, ಹೊಟ್ಟೆಕಿಚ್ಚು, ಮತ್ಸರ




‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ


ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.


**ಶಿಕ್ಷಕರಲ್ಲಿ ನಿವೇದನೆ:**

ಈ ವಿಶಿಷ್ಟ ಚಿತ್ರಪಟವನ್ನು ಮಕ್ಕಳಿಗೆ ತೋರಿಸುತ್ತಾ ಕವನವನ್ನು ಒಮ್ಮೆ ಓದಿ ಹೇಳಿ. ನಂತರ ಮಕ್ಕಳೇ ಸ್ವತಃ ವಾಚಿಸಲು ಮತ್ತು ರಾಗವಾಗಿ ಹಾಡಲು ಪ್ರೋತ್ಸಾಹಿಸಿ. ಅನಂತರ ಅವರದೇ ಆದ ರೀತಿಯಲ್ಲಿ ಸಂಭಾಷಣೆ ನಡೆಸಲು, ಕಿರು ರೂಪಕ ಮಾಡಲು ಪ್ರೇರೆಪಿಸಿ.


ಸಂಪರ್ಕ ಮಾಹಿತಿ
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76,‘ಪುಷ್ಪಾಂಜಲಿ’ 3ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ – 580007, ಮೊ. 998 666 1055
dhwanitrust@gmail.com / www.dhwanitrust.org